ಎಂದೆಂದಿಗೂ ಪ್ರಜಾತಂತ್ರ ವ್ಯವಸ್ಥೆಯಿತ್ತೆಂದೂ, ಅಲ್ಲಿ ಚೌಸೆಸ್ಕೋ ಆಗಲೀ, ಕಮ್ಯುನಿಸಂ ಆಗಲೀ ಇರಲಿಲ್ಲವೆಂದೂ, ಯಾವುದೇ ಪ್ರಾಂತದ ನಾಶ ಆಗಿಯೇ ಇಲ್ಲವೆಂದು ತಿಳಿಯಬೇಕು ಅಥವಾ ಕ್ರಿಸ್ತಶಕ ಎರಡರಲ್ಲಿ ರೋಮನ್ ಚಕ್ರವರ್ತಿಯೇ, ತನ್ನ ಬೇಸಿಗೆ ಅರಮನೆಯಾಗಿ, ಈ ಪ್ರಜೆಗಳ ಅರಮನೆಯನ್ನು ಕಟ್ಟಿದನೆಂದು ತಿಳಿಯಬೇಕು.

'ಯಾರಿಗಾದರೂ ಪ್ರಶ್ನೆ ಕೇಳುವುದಿದೆಯೇ?'

'ಈ ಅರಮನೆಯನ್ನು ಕಟ್ಟುವಾಗ ಎಷ್ಟು ಜನ ಸತ್ತರೆಂದು ಹೇಳಬಹುದೇ?' ನನ್ನ ಪ್ರಶ್ನೆಗೆ ಗೈಡ್ ಒಂದು ಕ್ಷಣ ಹುಬ್ಬುಗಂಟಿಕ್ಕಿದಳು. ಆದರೆ ಸ್ವಲ್ಪ ಸಮಯದ ನಂತರ ಹೇಳಿದಳು, 'ಹತ್ತು ಸಾವಿರ'. ನನಗೇನೋ ಅದು, ಬೇರೆಲ್ಲ ವಿವರಗಳಂತೆಯೇ ಇದೂ ಹೆಚ್ಚು ಎನ್ನಿಸಿತು ಮತ್ತು ನನ್ನ ಅನುಮಾನವನ್ನು ವ್ಯಕ್ತಪಡಿಸಿದೆ. ಆ ಗೈಡ್, ಅದೇ ವಿವರ ಸರಿಯೆಂದಳು. ನನಗೆ ಆಶ್ಚರ್ಯ.

ಆ ಗೈಡ್, 'ಸುಮಾರು ಜನರು ಕೆಲಸ ಮಾಡುವಲ್ಲಿ, ಜನರು ಸಾಯುವುದರಲ್ಲಿ ಅಷ್ಟೇನೂ ಆಶ್ಚರ್ಯವಿಲ್ಲ' ಎಂದಳು. ಮುಂದುವರೆದು, 'ಆ ಕೆಲಸ ಎಷ್ಟು ತ್ವರಿತ ಗತಿಯಿಂದ ಸಾಗಿತ್ತೆಂದರೆ, ಸತ್ತವರನ್ನು ಹೊರಗೆ ತೆಗೆದುಕೊಂಡು ಹೋಗುವಷ್ಟು ಸಮಯ ಕೂಡ ಅವರಲ್ಲಿ ಇರಲಿಲ್ಲ. ಅಲ್ಲೇ ಗೋಡೆಗಳ ಕಾಂಕ್ರೀಟಿನ ಮಧ್ಯೆ ಆ ದೇಹಗಳನ್ನು ಹೂಳಲಾಯಿತು' ಎಂದಳು. ಗುದ್ದಲಿ ಪೂಜೆಯಾದಾಗಿನಿಂದ, ಅಲ್ಲಿ ಪ್ರತಿದಿನ ಮೂರು ಪಾಳಿಯಲ್ಲಿ ದಿನದ ಇಪ್ಪತ್ತನಾಲ್ಕು ಗಂಟೆಗಳೂ ಅಲ್ಲಿ ಕೆಲಸ ಮಾಡಲಾಯಿತಂತೆ.

ನಾನೆಂದೆ, 'ಅಂದರೆ, ಈ ಪ್ರಜೆಗಳ ಅರಮನೆ ಒಂದು ದೊಡ್ಡ ಸ್ಮಶಾನ'.

ಆ ಗೈಡ್ ಸ್ವಲ್ಪ ಮೆಲುವಾಗಿಯೇ ಕೇಳಿದಳು, 'ನಿಮಗೆ ಯಾಕೆ ಹೀಗನ್ನಿಸುತ್ತೆ? ಈಜಿಪ್ಟಿನ ಪಿರಮಿಡ್ ಕಟ್ಟುವಾಗಲೂ ಜನರು ಸತ್ತಿದ್ದರಲ್ಲ? ಆದರೆ ಈಗ ನೋಡಿ, ಈಜಿಪ್ಟಿನ ಜನರಿಗೆ ತಮ್ಮ ಪಿರಮಿಡ್ಡುಗಳನ್ನು ಕಂಡರೆ ಎಷ್ಟು ಗರ್ವ? ಅವುಗಳನ್ನು ಯಾರೂ ತೆಗೆದುಕೊಂಡು ಹೋಗಲಾಗುವುದಿಲ್ಲ. ನೋಡಿ. ಅದೆಲ್ಲ ಆಗಿ ಎಷ್ಟು ವರ್ಷಗಳಾದವು? ಯಾರಾದರೂ ಅವರನ್ನು ನೆನಪಿಸಿಕೊಳ್ಳುತ್ತಾರೇನು? ಯಾರೂ ಇಲ್ಲ. ಜನ ಮರೆಯುತ್ತಾರೆ. ಹಾಗೆಯೇ, ಈ ಅರಮನೆಯನ್ನು ಕಟ್ಟುವಾಗ ಸತ್ತ ಎಲ್ಲರನ್ನೂ ಜನ ಮರೆಯುತ್ತಾರೆ. ಆದರೆ ಈ ಅದ್ಭುತ ಕಟ್ಟಡವನ್ನು ರೊಮೇನಿಯನ್ನರ ಹತ್ತಿರ ಯಾವಾಗಲೂ ಇರುತ್ತದೆ'.

ಹೊತ್ತಾಯಿತು, ಇನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ ಗೈಡ್ ಹೇಳುತ್ತ ನಮ್ಮನ್ನು ಮುನ್ನಡೆಸಿದಳು.

ಆದರೆ ಬೇರೆ ಯಾರಾದರೂ ಈ ಬಗ್ಗೆ, ಈ ಕಟ್ಟಡದ ಒಳಗೆ ಮತ್ತು ಕೆಳಗೆ ಇರಬಹುದಾದ ಗುಟ್ಟುಗಳನ್ನು ತಿಳಿಯಲು ಇಚ್ಛಿಸಬಹುದು. ಇದರ ಕೆಳಗೆ ಇನ್ನೊಂದು ನಗರವಿದೆಯಂತೆ, ಒಂದು ಅಣುಬಾಂಬಿನಿಂದ ರಕ್ಷಣೆ ಪಡೆಯಲು ಕಟ್ಟಿದ ಬಂಕರ್ ಮತ್ತು ಬುಖಾರೆಸ್ಟ್‌ನಿಂದ ಹೊರಗೆ ಹೋಗಲು ಒಂದು ರಸ್ತೆ.

ಗೈಡ್ ನಮ್ಮನ್ನೆಲ್ಲಾ ಉದ್ದೇಶಿಸಿ, 'ಇಲ್ಲಿಗೆ ಈ ಪ್ರವಾಸ ಮುಗಿಯಿತು' ಎಂದು ಹೇಳಿದಳು. ಅದೇ ಉಸಿರಿನಲ್ಲಿಯೇ, ನೀವು ಇಂದು ನೋಡಿದ್ದು ಬರೇ ಐದು ಪ್ರತಿಶತ ಮಾತ್ರ ಎಂದೂ ನುಡಿದಳು.

ನಮಗೆಲ್ಲಾ ವಂದನೆ ಹೇಳುವ ಹೊತ್ತಿಗೆ ಒಬ್ಬ ಪ್ರವಾಸಿ ಅವಳ ಹತ್ತಿರ ಹೋಗಿ, 'ಇಲ್ಲಿ ಒಂದು ಹಗರಣ ಆಯಿತು ಎಂದು ಕೇಳಿದ್ದೇನೆ' ಎಂದ.

ಅವಳು ಉತ್ತರಿಸುತ್ತಾಳೆ: 'ನನಗೊಂದೂ ಗೊತ್ತಿಲ್ಲ...' ನಂತರ ಅವಳು ಓಡಿ ಹೋಗಿ, ಅಲ್ಲಿದ್ದ ಒಬ್ಬ ಭದ್ರತಾ ಸಿಬ್ಬಂದಿಯೊಬ್ಬನ ಜೊತೆ ಮಾತನಾಡುತ್ತಾಳೆ. ಅವಳು ವಾಪಸ್ ಬಂದಾಗ, ನಾನು